1 2	3	4	5	6	7	8	9
23. ಹಾಸನ	0	1	16	83	52	420	2062
24. ಕೊಡಗು	1	1	8	29	4	188	1317
25. ಮಂಡ್ಯ	1	1	9	71	37	375	1834
26. ಮೈಸೂರು	4	0	16	96	47	432	3593
27. ಉಡುಪಿ	1	1	7	62	11	293	993
ಒಟ್ಟು	**42**	**24**	**301**	**1679**	**578**	**8143**	**47217**

567 (616) ಶ್ರೀ ಎಸ್.ಎಸ್. ಪಾಟೀಲ್ (ಮುಂಡರಗಿ) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಮುಂಡರಗಿ ಮತದಾರ ಕ್ಷೇತ್ರದಲ್ಲಿ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಲ್ಲಿ ಖಾಲಿ ಇರುವ ವೈದ್ಯಾಧಿಕಾರಿಗಳ ಹುದ್ದೆಗಳಿಗೆ ಆಯುರ್ವೇದ ಅಭ್ಯರ್ಥಿಗಳನ್ನು ನೇಮಕಾತಿ ಮಾಡಿದ್ದು ಅದೇ ರೀತಿ ಎಂಬಿಬಿಎಸ್ ವೈದ್ಯರನ್ನು ಕೂಡಲೇ ನೇಮಕಾತಿ ಮಾಡಲಾಗುವುದೇ;

ಆ) ಸದರಿ ಇಲಾಖೆಯಲ್ಲಿಯೇ ಖಾಲಿ ಇರುವ ಇತರೆ ಸಿಬ್ಬಂದಿಗಳನ್ನು ಯಾವಾಗ ಭರ್ತಿ ಮಾಡಲಾಗುವುದು? (ವಿವರ ನೀಡುವುದು)

ಶ್ರೀ ಆರ್. ಅಶೋಕ್ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) :

ಅ) ಹೌದು. 500 ವೈದ್ಯರ ಹುದ್ದೆಗಳನ್ನು ನೇರ ನೇಮಕಾತಿ ಮೂಲಕ ಭರ್ತಿ ಮಾಡಲು ಕರಡು ಅಧಿಸೂಚನೆ ಹೊರಡಿಸಲಾಗಿದೆ. ಮೊದಲನೇ ಹಂತದಲ್ಲಿ 250 ವೈದ್ಯರನ್ನು ನೇಮಕ ಮಾಡಿಕೊಳ್ಳುವ ಬಗ್ಗೆ ಅಂತಿಮ ಅಧಿಸೂಚನೆಯನ್ನು ಹೊರಡಿಸಿ ನೇರ ನೇಮಕಾತಿಯನ್ನು ಶೀಘ್ರ ಕೈಗೆತ್ತಿಕೊಳ್ಳಲು ಕ್ರಮ ಕೈಗೊಳ್ಳಲಾಗುತ್ತಿದೆ.

ಆ) ಶುಶ್ರೂಷಕ ಹುದ್ದೆಗಳು 400, ಕಿರಿಯ ಆರೋಗ್ಯ ಸಹಾಯಕ (ಪುರುಷ) 329, ಕಿರಿಯ ಪ್ರಯೋಗಶಾಲಾ ತಂತ್ರಜ್ಞ 532, ಕ್ಷ-ಕಿರಣ ತಂತ್ರಜ್ಞರು 56, ಫಾರ್ಮಾಸಿಸ್ಟ್ 400, ನೇತ್ರ ಸಹಾಯಕರು 90, ಕಿರಿಯ ಆರೋಗ್ಯ ಸಹಾಯಕರು (ಮಹಿಳೆ) 1000, ನೇಮಕ ಮಾಡಿಕೊಳ್ಳುವ ಬಗ್ಗೆ ಅಧಿಸೂಚನೆ ಸಂಖ್ಯೆ: ಆಕುಕ 862 ಹೆಚ್ಎಸ್ಹೆಚ್ 2004 ದಿನಾಂಕ: 15-5-2005 ರಂದು ಹೊರಡಿಸಲಾಗಿದೆ. ಅಂತಿಮ ಅಧಿಸೂಚನೆಯ ನಂತರ ನೇಮಕಾತಿ ಪ್ರಕ್ರಿಯೆ ಕೈಗೊಳ್ಳಲಾಗುವುದು. ಬಡ್ತಿ ಮೂಲಕ ತುಂಬಬಹುದಾದ ಹುದ್ದೆಗಳನ್ನು ತುಂಬಲು ಅಗತ್ಯ ಕ್ರಮ ಕೈಗೊಳ್ಳಲಾಗುತ್ತಿದೆ

568 (681) ಶ್ರೀ ಶಂಕರಲಿಂಗೇಗೌಡ ಹೆಚ್.ಎಸ್. (ಚಾಮರಾಜ) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಮೈಸೂರು ನಗರದಲ್ಲಿ ಪ್ರಾಥಮಿಕ ಆರೋಗ್ಯ ಘಟಕ / ಕೇಂದ್ರಗಳ ಸಂಖ್ಯೆ ಎಷ್ಟು;

ಆ) ಆ ಪೈಕಿ ಸ್ವಂತ ಕಟ್ಟಡ ಹೊಂದಿರುವ ಕೇಂದ್ರಗಳಾವುವು; ಸ್ವಂತ ಕಟ್ಟಡ ಹೊಂದಿಲ್ಲ ದಿರುವುವು ಯಾವುದು;

ಇ) ಸ್ವಂತ ಕಟ್ಟಡ ಹೊಂದಿಲ್ಲದ ಘಟಕ / ಕೇಂದ್ರಗಳಿಗೆ ಸ್ವಂತ ಕಟ್ಟಡ ಕಲ್ಪಿಸಲು ಸರ್ಕಾರ ಈ ವರೆಗೆ ಯಾವ ರೀತಿಯ ಕ್ರಮ ಕೈಗೊಂಡಿದೆ ಹಾಗೂ ಕೈಗೊಳ್ಳಲಿದೆ ವಿವರ ಒದಗಿಸುವುದು?

ಶ್ರೀ ಆರ್. ಅಶೋಕ್ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) :

ಅ) 15 ಪ್ರಾ.ಆ. ಘಟಕಗಳು, 5 ಹೆರಿಗೆ ಆಸ್ಪತ್ರೆಗಳು ಹಾಗೂ 2 ನಗರ ಪ್ರಾ.ಆ. ಕೇಂದ್ರಗಳು ಇರುತ್ತವೆ.

ಆ) ಪ್ರಾ.ಆ. ಘಟಕಗಳಾದ ಕೃಷ್ಣಮೂರ್ತಿಪುರಂ, ವಿಶ್ವೇಶ್ವರ ನಗರ ಹಾಗೂ ಉದಯಗಿರಿಯಲ್ಲಿ ಸ್ವಂತ ಕಟ್ಟಡ ಇರುವುದಿಲ್ಲ.

ಇ) ಕೃಷ್ಣಮೂರ್ತಿ ಪುರಂನ ಪ್ರಾ.ಆ. ಘಟಕದ ಕಾರ್ಯಸ್ಥಾನವನ್ನು ಮೈಸೂರಿನ ಗಾಂಧೀನಗರ ಬಡಾವಣೆಯಲ್ಲಿ ಆಸ್ಪತ್ರೆಯ ಉದ್ದೇಶಕ್ಕಾಗಿ ನೂತನವಾಗಿ ಕಟ್ಟಿರುವ ಕಟ್ಟಡಕ್ಕೆ ಬದಲಾಯಿಸಲು ಜಿಲ್ಲಾ ಪಂಚಾಯತ್‌ಗೆ ಕೋರಲಾಗಿದೆ.

ವಿಶ್ವೇಶ್ವರ ನಗರದ ಪ್ರಾ.ಆ. ಘಟಕವು ನಗರ ಪಾಲಿಕೆ ಕಟ್ಟಡದಲ್ಲಿದೆ.

ಉದಯಗಿರಿ ಪ್ರಾ.ಆ. ಘಟಕದ ಕಾರ್ಯಸ್ಥಾನವನ್ನು ಮೈಸೂರಿನ ಕುಂಬಾರಕೊಪ್ಪಲು ಬಡಾವಣೆಯಲ್ಲಿ ಲೋಕಸಭಾ ಸದಸ್ಯರ ನಿಧಿಯಿಂದ ನಿರ್ಮಿಸಿರುವ ನೂತನ ಕಟ್ಟಡಕ್ಕೆ ಸ್ಥಳಾಂತರಿಸಲು ಯೋಜಿಸಲಾಗಿದೆ.

569 (682) ಶ್ರೀ ಶಂಕರಲಿಂಗೇಗೌಡ ಹೆಚ್.ಎಸ್. (ಚಾಮರಾಜ) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಮೈಸೂರು ನಗರದಲ್ಲಿರುವ ಪ್ರಾಥಮಿಕ ಆರೋಗ್ಯ ಘಟಕ / ಕೇಂದ್ರಗಳ ಸಂಖ್ಯೆ ಎಷ್ಟು;

ಆ) ಆ ಪ್ರಾಥಮಿಕ ಆರೋಗ್ಯ ಘಟಕ / ಕೇಂದ್ರಗಳ ಪೈಕಿ ಯಾವ ಯಾವ ಘಟಕ / ಕೇಂದ್ರಗಳಲ್ಲಿ ವೈದ್ಯಕೀಯ ಸಿಬ್ಬಂದಿಗಳ ಕೊರತೆ ಇದೆ. ಯಾವ ಯಾವ ಘಟಕಗಳಲ್ಲಿ ಯಾವ ಯಾವ ಹುದ್ದೆಗಳ ಕೊರತೆ ಇದೆ;

ಇ) ಸಿಬ್ಬಂದಿ ಕೊರತೆಯಿಂದಾಗಿ ರೋಗಿಗಳ ಚಿಕಿತ್ಸೆಗೆ ತೊಂದರೆಯಾಗಿಲ್ಲವೇ; ಸಿಬ್ಬಂದಿ ಕೊರತೆ ನೀಗಿಸಲು ಸರ್ಕಾರ ಯಾವ ಯಾವ ಕ್ರಮ ಕೈಗೊಂಡಿದೆ;

ಈ) ಹಾಗಿಲ್ಲದಿದ್ದಲ್ಲಿ, ಕೈಗೊಳ್ಳಲಿರುವ ಕ್ರಮಗಳಾವುವು? (ವಿವರ ಒದಗಿಸುವುದು)

ಶ್ರೀ ಆರ್. ಅಶೋಕ್ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) :

ಅ) ಮೈಸೂರು ನಗರ ಪ್ರದೇಶದಲ್ಲಿ ಪ್ರಾಥಮಿಕ ಆರೋಗ್ಯ ಘಟಕ –15, ಪ್ರಾಥಮಿಕ ಆರೋಗ್ಯ ಕೇಂದ್ರ –02, ಹೆರಿಗೆ ಆಸ್ಪತ್ರೆ –5.